

ಡಾ.ವಿನೋದ ಛೆಬ್ಬಿ

ಕಾಮಕೂಟದ ಮೂಲಕ ಪಾರಮ್ಯ ಸಾಧಿಸಲು ಗಂಡಿಗೂ ಗಂಡಿನ ಪಾರಮ್ಯವನ್ನು ಒಪ್ಪಿಕೊಳ್ಳಲು ಹೆಣ್ಣಿಗೂ ಹೇಳಿಕೊಡಲಾಗಿದೆ.

# 198: ಪುರುಷರ ನಾಕನರಕ-7

ಗಂಡು ತನ್ನ ಗಂಡಸುತನವನ್ನು ಹೊರಗಿಟ್ಟು 'ನಿನ್ನಂತೆ ನಾನು' ಎಂಬ ತತ್ವಮಸಿ ಭಾವವನ್ನು ತಂದರೆ ಮಾತ್ರ ಬಾಂಧವ್ಯದ ಕಾಮಕೂಟವು ಅದ್ಭುತ ಅನುಭವವಾಗಲು ಸಾಧ್ಯವಿದೆ ಎಂದು ಹೇಳುತ್ತಿದ್ದೆ.

ನಾನು ಮುಂದಿಡುತ್ತಿರುವ ಪರಿಕಲ್ಪನೆಗೆ ಹೆಚ್ಚಿನವರು– ಹೆಂಗಸರೂ ಸೇರಿ ಒಪ್ಪದಿರಬಹುದು. ಮನುಷ್ಯರೇಕೆ, ಪ್ರಾಣಿಪಕ್ಷಿಗಳಲ್ಲೂ ಗಂಡೇ ಸಮೀಪಿಸುತ್ತದೆ, ಹೆಣ್ಣು ಒಪ್ಪಿಕೊಳ್ಳುತ್ತದೆ. ಉದಾಹರಣೆಗೆ, ಗಂಡುನಾಯಿ ಅಪರಿಚಿತ ಹೆಣ್ಣುನಾಯಿಯನ್ನು ಕಂಡರೆ ಆಕ್ರಮಣ ಮಾಡುತ್ತದೆ. ಆದರೆ ಬೆದೆಗೆ ಬಂದಾಗ ಬಾಲ ಆಡಿಸುತ್ತ ಮೇಲೇರುತ್ತದೆ; ಹೆಣ್ಣು ಒಪ್ಪಿಕೊಳ್ಳುತ್ತದೆ. ನವಿಲುಗಳಲ್ಲಿ ಗರಿಗೆದರಿ ಜಂಭ ತೋರುವುದು ಗಂಡು ಮಾತ್ರ. ಹೋರಿ ಹಸುವಿನ ಮೇಲೆ ಏರುತ್ತದೆಯೇ ವಿನಾ ಹಸು ಹೋರಿಯ ಮೇಲೆ ಏರುವುದಿಲ್ಲ. ಹಾಗೆಯೇ ಮಾನವರು ಎಷ್ಟೇ ಬುದ್ಧಿ ಬೆಳೆದವರಾದರೂ ಗಂಡು ಹೆಣ್ಣು ಸಮನಾದರೂ ಕಾಮಕ್ರಿಯೆಗೆ ಬಂದಾಗ ಗಂಡೇ ಹೆಣ್ಣನ್ನು ಒಲೈಸಬೇಕು, ಹೆಣ್ಣು ಒಪ್ಪಿಕೊಳ್ಳಬೇಕು. ಇದು ಇಬ್ಬರಿಗೂ ಹಿತ. ಒಂದುವೇಳೆ ಗಂಡಿಗೆ ಆಸೆಯಿಲ್ಲದಿದ್ದರೆ ಹೆಣ್ಣು ಅವನನ್ನು ಒಲಿಸಿಕೊಳ್ಳಬೇಕು. ಹೀಗೆ ಪುರುಷರಿಂದ ಆರಂಭ, ಸ್ತ್ರೀಯರಿಂದ ಅನುಸರಣೆ ಪ್ರಕೃತಿಯ ಸಹಜ ಧರ್ಮ ಎಂದು ಹೆಚ್ಚಿನವರು ನಂಬಿಕೊಂಡಿರಬಹುದು.

ಇದೇನೋ ಒಂದು ರೀತಿಯಲ್ಲಿ ಸರಿ. ಆದರೆ ಪ್ರಾಣಿಗಳ ಈ ವರ್ತನೆಯ ಉದ್ದೇಶವೇನು? ಸಂತಾನೋತ್ಪತ್ತಿಯೇ ಎನ್ನುವುದರಲ್ಲಿ ಸಂದೇಹವಿಲ್ಲ. ಸಂತಾನೋತ್ಪತ್ತಿಯ ಸಮಯ ಬಂದಾಗ ಮಾನವರೂ ಪ್ರಾಣಿಗಳಂತೆ ವರ್ತಿಸುವುದರ ಬಗೆಗೆ ಸಂಶೋಧನೆಯ ಆಧಾರವಿದೆ. ಹೆಣ್ಣು ಸರ್ವಕಾಲದಲ್ಲೂ ಸ್ನೇಹಪರನಾದ ಸಂಗಾತಿಯನ್ನು ಬಯಸಿದರೆ, ಗರ್ಭಧಾರಣೆಗೆ ಅಂಡವು ಫಲಿತವಾಗುವ ಎರಡು ದಿನಗಳಲ್ಲಿ ಸಮರ್ಥ ಅಂಗಸೌಷ್ಟವ ಇರುವ ಆಕ್ರಮಣಕಾರಿ ಗಂಡಿಗೆ ಅರಿವಿಲ್ಲದೆ ಆಕರ್ಷಿತರಾಗುತ್ತಾರೆ ಎಂದು ತಿಳಿದುಬಂದಿದೆ. ಇದು ಸಂತಾನೋತ್ಪತ್ತಿಗೆ ಗಂಡುಹೆಣ್ಣುಗಳನ್ನು ಸೆಳೆಯಲು ಸೃಷ್ಟಿಯು ಮಾಡಿರುವ ಉಪಾಯ ಎಂಬುದು ಸ್ಪಷ್ಟ. ಇದೇ ಹೆಚ್ಚಿನ ಜನಪ್ರಿಯ ಚಲನಚಿತ್ರಗಳ ಹೂರಣ ಕೂಡ– ಬೆನ್ನುಹತ್ತುವ ಸಾಹಸಿ ಗಂಡು, ಅನುಸರಿಸುವ ಅಮಾಯಕ ಹೆಣ್ಣು, ಕೊನೆಗೆ ಮದುವೆಯಾಗಿ ಸುಖವಾಗಿದ್ದರು ಎಂಬ ಸಂದೇಶ. ಎಲ್ಲವೂ ಆಪ್ಯಾಯಮಾನ!

ಅದಿರಲಿ, ಮನುಷ್ಯರ ಕೆಲವು ಕ್ರಮಗಳನ್ನು ಸ್ವಲ್ಪ ಗಮನಿಸಿ: ಸಂತಾನ ನಿಯಂತ್ರಣಕ್ಕಾಗಿ ಗರ್ಭನಿರೋಧ ಕ್ರಮದ ಅನುಸರಣೆ, ಸಂತಾನ ಬೇಡವೆಂದು ಶಸ್ತ್ರಚಿಕಿತ್ಸೆ, ಸಂತಾನ ಸಾಧ್ಯವಿಲ್ಲ ಎಂದಮೇಲೂ ಸಂಭೋಗದ ಮುಂದುವರಿಕೆ– ಇಲ್ಲೇನು ಕಾಣುತ್ತಿದೆ? ಕಾಮಕೂಟದಿಂದ ಸಂತಾನದ ಉದ್ದೇಶವನ್ನು ಹೊರಗೆ ಹಾಕಿದ್ದೇವೆ. ಪ್ರಾಣಿಗಳು ಹೀಗೆ ಮಾಡುವುದಿಲ್ಲ! ಈ ವ್ಯತ್ಯಾಸವೇ ಮಾನವರನ್ನು ಇತರ ಪ್ರಾಣಿಗಳಿಂದ ಬೇರ್ಪಡಿಸುತ್ತದೆ. ಆದುದರಿಂದ ಮನುಷ್ಯರನ್ನು ಪ್ರಾಣಿಗಳಿಗೆ ಹೋಲಿಸುವುದನ್ನು ನಿಲ್ಲಿಸಿ ಮನುಷ್ಯರನ್ನಾಗಿಯೇ ನೋಡೋಣ.

ಮಾನವರ ಕಾಮಕೂಟದ ಉದ್ದೇಶವೆಂದರೆ ಕಾಮಸುಖ, ಬಾಂಧವ್ಯ, ಒಡನಾಟ ಎಂಬುದು ಎಲ್ಲರಿಗೂ ಗೊತ್ತು. ಆದರೆ ಅಷ್ಟಾಗಿ ಅರಿವಿಗೆ ಬರದಿರುವ ಇನ್ನೊಂದು ಉದ್ದೇಶವೂ ಇದೆ. ಇದು ಅರ್ಥವಾಗಲು ಕೆಲವು ದೃಷ್ಟಾಂತಗಳನ್ನು ಕೊಡುತ್ತಿದ್ದೇನೆ:

ಒಂದು: ಈ ಗಂಡಸಿಗೆ ಶೀಘ್ರಸ್ಖಲನದ ಸಮಸ್ಯೆಯಿದೆ. ಇವನ ಹೆಂಡತಿಗೆ ಕೂಟದಲ್ಲಿ ಬಿಡಿ, ಗಂಡನಲ್ಲೇ ಆಸಕ್ತಿಯಿಲ್ಲ. ಕೂಟಕ್ಕೆ ಹಾತೊರೆದರೆ (ಅವನ ಮಾತಿನಲ್ಲಿ) ಕಜ್ಜಿನಾಯಿಯಂತೆ ದೂರವಿಡುತ್ತಾಳೆ. ಎರಡುಮೂರು ತಿಂಗಳಿಗೊಮ್ಮೆ ಕೃಪೆ ತೋರುತ್ತಾಳೆ. ಇವನು ಕ್ರಿಯೆ ಮುಗಿಸುವುದನ್ನೇ ಕಾಯುತ್ತಿದ್ದು, ನಂತರ, ಗಂಡಸರೆಲ್ಲ ಕಚ್ಚೆಹರುಕರು ಎಂದು ತುಚ್ಛೀಕರಿಸುತ್ತಾಳೆ. ಅವನ ಸಂಭೋಗದ ಬಯಕೆಯನ್ನು ಆಕೆ ತಿರಸ್ಕರಿಸುತ್ತ ತನ್ನ ಹೆಚ್ಚುಗಾರಿಕೆ ಸಾಧಿಸುತ್ತಿರುವಾಗ ಹೆಚ್ಚುಹೊತ್ತು ಸಂಭೋಗಿಸುವ ಹಾಗಾದರೆ, ಅಪರೂಪಕ್ಕೆ ಸಿಗುವುದನ್ನೇ ಹೆಚ್ಚಾಗಿ ಸವಿಯಬಹುದು ಎಂಬಾಸೆಯಿಂದ ನನ್ನಲ್ಲಿ ಬಂದಿದ್ದಾನೆ.

ಎರಡು: ಈ ಹಳ್ಳಿಯ ಹುಡುಗಿ ಯಾವ ಕಾರಣಕ್ಕೋ ಗೊತ್ತಿಲ್ಲ, ಇತ್ತೀಚೆಗೆ ಗಂಡನ ಮೇಲೆ ಮುನಿಸಿಕೊಂಡು ಸಂಭೋಗಕ್ಕೆ ಒಪ್ಪುತ್ತಿಲ್ಲ. ಅಷ್ಟಕ್ಕೂ ಅವನು ಮೈಮೇಲೆ ಬಂದರೆ ತೊಡೆ ಬಿಗಿಹಿಡಿಯುತ್ತಾಳೆ. ಹಾಗಾಗಿ ಮುಂಚೆ ಸುಲಲಿತವಾಗಿ ನಡೆಯುತ್ತಿದ್ದ ಸಂಭೋಗ ಈಗ ಸಾಧ್ಯವಾಗುತ್ತಿಲ್ಲ. ಮುಂಚೆ ಗಂಡನ ಆಕ್ರಮಣವನ್ನು ಸುಖದಿಂದ ಒಪ್ಪುವವಳು ಈಗ ಒಲ್ಲೆಯೆನ್ನುತ್ತಿದ್ದಾಳೆ. ಗಂಡನಿಗೆ ದಿಕ್ಕು ತೋಚುತ್ತಿಲ್ಲ.

ಮೂರು: ಈ ತರುಣಿ ನಿರಾಸಕ್ತ ಗಂಡಸರನ್ನು ಕೆರಳಿಸುತ್ತಾಳೆ. ಅವರು ಹತ್ತಿರವಾದಾಗ ಮುಂದುವರಿಯಲು ಬಿಟ್ಟುಕೊಡದೆ ವಿಮುಖಳಾಗುತ್ತಾಳೆ. ಅಂತೂ ಗಂಡಸೊಬ್ಬ ಅವಳನ್ನು ಗೆದ್ದು ಕೂಡಿದ್ದಾನೆ. ನಂತರ ಬೇಗ ಅವಳಿಂದ ವಿಮುಖನಾಗಿದ್ದಾನೆ.

ಇಲ್ಲೆಲ್ಲ ಏನು ಕಾಣುತ್ತಿದೆ? ಗಂಡಸು (ಗಂಡು ಪ್ರಾಣಿಯಂತೆ) ಸಂಭೋಗಕ್ಕೆ ಹಾತೊರೆಯುವುದರ ಹಿಂದೆ ಪಾರಮ್ಯದ ಹಾಜರಿ ಎದ್ದುಕಾಣುತ್ತದೆ. ಇದಕ್ಕೆ ಪ್ರತಿಯಾಗಿ ಹೆಣ್ಣು ಸಂಭೋಗವನ್ನು ನಿರಾಕರಿಸುವುದರ ಅಥವಾ ಒಪ್ಪುವುದರ ಹಿಂದೆಯೂ ಪಾರಮ್ಯದ ಪಾತ್ರವಿದೆ. ಇಂಥ ಜೋಡಿಗಳು ಕಡೆಗೆ ಕೂಟದ ಕುಸ್ತಿಕಣದಲ್ಲಿ ಪರಸ್ಪರ ತೆಕ್ಕೆಬಿದ್ದಾಗ ಯಾರು ಗೆದ್ದರು ಯಾರು ಸೋತರು ಎನ್ನುವುದು ಮುಖ್ಯವಾಗುತ್ತ, ಬಾಂಧವ್ಯ ಹಾಗೂ ಒಡನಾಟಗಳು ಮಲಗುವ ಕೋಣೆಯ ಕಾಲೊರೆಸುಗಳಾಗುತ್ತವೆ. ಇಲ್ಲಿ ಇನ್ನೊಂದು ಸಂಗತಿ ನೆನಪಾಗುತ್ತಿದೆ. ನನ್ನ ಸಹಪಾಠಿಗಳಿಬ್ಬರು ಪ್ರೀತಿಸಿ ಮದುವೆ ಆಗಿದ್ದಾರೆ. ಒಮ್ಮೆ ಅವರೊಡನೆ ಹರಟುವಾಗ ಅವರಿಬ್ಬರಲ್ಲಿ ಯಾರು ಮೊದಲು ಪ್ರೀತಿಯ ನಿವೇದನೆ ಮಾಡಿಕೊಂಡರು ಎನ್ನುವ ಮಾತು ಬಂತು. 'ನೀನು ಕೇಳಿಕೊಂಡೆ, ಅದಕ್ಕೇ ನಾನು ಒಪ್ಪಿದ್ದು' ಎಂದು ಇಬ್ಬರೂ ವಾದಿಸಿ ಜಗಳ ಮಾಡಿಕೊಂಡರು!

ಇದರರ್ಥ ಏನು? ಕಾಮಕೂಟಕ್ಕೆ ಇನ್ನೊಂದು ಉದ್ದೇಶವೂ ಇದೆ: ಯಾರು ಪ್ರಬಲರೆಂದು ನಿರ್ಧರಿಸಲು ಹೂಡುವ ತಂತ್ರ! ಇದು ನೇತ್ಯಾತ್ಮಕವಾಗಿ ಇರಬೇಕೆಂದಿಲ್ಲ. ಉದಾಹರಣೆಗೆ, ಹೆಚ್ಚು ಹೊತ್ತು ಸಂಭೋಗಿಸುವ ಗಂಡಸಿಗೆ ಹೆಣ್ಣಿಗೆ ತೃಪ್ತಿಕೊಟ್ಟ ಸಾರ್ಥಕತೆಗಿಂತ ತನ್ನ ಗಂಡಸುತನದ ಬಗೆಗೆ ಅಹಂಕಾರ ಹೆಚ್ಚಾಗಿ ಇರುತ್ತದೆ.

ನಾನು ಚಿಕ್ಕವನಿರುವಾಗ ಒಮ್ಮೆ ನನ್ನಪ್ಪ ಅಮ್ಮನಿಗೆ ಹೇಳುತ್ತಿದ್ದ: ಅವನ ಸ್ನೇಹಿತ ಪ್ರತಿದಿನ ದೇವಸ್ಥಾನಕ್ಕೆ ಹೋಗಿ, ನಂತರ ಬೆಲೆವೆಣ್ಣಿನ ಮನೆಗೆ ಹೋಗುತ್ತಿದ್ದನಂತೆ. 'ಅವನ ಹೆಂಡತಿ ಜಗಳ ನಿಲ್ಲಿಸಿ ಸಾಕಷ್ಟು ಸುಖ ಕೊಟ್ಟಿದ್ದರೆ ಹೀಗೆ ಮಾಡುತ್ತಿರಲಿಲ್ಲ' ಎಂದು ಇಬ್ಬರೂ ಮಾತಾಡಿಕೊಂಡರು. ಆದರೆ ಹೆಂಡತಿಯ ಜಗಳದ ಕಾರಣದ ಬಗೆಗೆ ಯಾರೂ ಯೋಚಿಸಲಿಲ್ಲ ಎನ್ನುವುದು ದುರದೃಷ್ಟಕರ. ಈಗ ವಾಸ್ತವ ಗೊತ್ತಾಗುತ್ತಿದೆ. ತನ್ನ ಕಾಮುಕತೆಗೆ ಶರಣಾಗಬೇಕೆನ್ನುವ ಗಂಡನ ಒತ್ತಾಯವನ್ನು ಧಿಕ್ಕರಿಸುತ್ತ, 'ನನ್ನ ಬಯಕೆಗಳನ್ನೂ ಅರ್ಥ ಮಾಡಿಕೋ' ಎಂದು ಜಗಳ ಆಡುವ ಹೆಂಡತಿಗೆ ಪಾಠ ಕಲಿಸಲು ಗಂಡ ಹೊರಗಿನ ಹೆಣ್ಣುಗಳೊಡನೆ ಪಾರಮ್ಯ ಮೆರೆಯುತ್ತಿದ್ದ.

ಇದರ ತಾತ್ಪರ್ಯವೇನು? ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಕಾಮಕೂಟದ ಮೂಲಕ ಪಾರಮ್ಯವನ್ನು ಸಾಧಿಸಲು ಗಂಡಿಗೂ, ಗಂಡಿನ ಪಾರಮ್ಯವನ್ನು ಒಪ್ಪಿಕೊಳ್ಳಲು ಹೆಣ್ಣಿಗೂ ಹೇಳಿಕೊಡಲಾಗಿದೆ. ಈ ಮಾದರಿಯನ್ನು ಒಪ್ಪಿಕೊಂಡು ಗಂಡ ಕೊಟ್ಟಷ್ಟು ಸುಖಪಡುವ ಹೆಂಗಸರ ದಾಂಪತ್ಯ ಚೆನ್ನಾಗಿ ನಡೆಯುತ್ತದೆ, ಹಾಗೂ ಇದನ್ನು ವಿರೋಧಿಸುವವರ ದಾಂಪತ್ಯ ಕೆಡುತ್ತದೆ ಎಂದು ನಂಬಲಾಗುತ್ತದೆ. ಅದಕ್ಕೇ ಹೆಣ್ಣು ಸೋತು ಗೆಲ್ಲಬೇಕು, ಗಂಡು ಗೆದ್ದು ಸೋಲಬೇಕು ಎನ್ನುವ ಗಾದೆ ಹುಟ್ಟಿರಬಹುದು. ಇದು ಗಂಡುಹೆಣ್ಣುಗಳ ಸಮಾಜಲೈಂಗಿಕ ವರ್ತನೆಯ ಮೇಲೂ ಪ್ರತಿಫಲನಗೊಳ್ಳುತ್ತದೆ. ಹೆಚ್ಚು ಕಾಮಾಸಕ್ತಿ ತೋರುವ ಗಂಡಿಗೆ ಮೆಚ್ಚುಗೆ ಬಂದರೆ ಹೆಣ್ಣಿಗೆ ಎಚ್ಚರಿಕೆ ಬರುತ್ತದೆ!

ಈಗಹೇಳಿ: ಪ್ರಾಣಿಗಳಿಂದ ಸ್ಫೂರ್ತಿಪಡೆದ ಪುರುಷ ಪ್ರಧಾನ ಸಂಸ್ಕೃತಿ ನಮಗೆ ಒಪ್ಪುತ್ತದೆಯೆ? ಉಚಿತ ಸಹಾಯವಾಣಿಗೆ ಕರೆಮಾಡಿ: 8494944888.